## ಕ್ರಿಕೆಟ್ ದ್ರೋಣ – ಎಂ.ಕೆ.ಸೀತಾರಾಮ್

ಮಹಾಭಾರತದಲ್ಲಿ ಏಕಲವ್ಯನು ತನಗೆ ವಿದ್ಯೆಯನ್ನು ನಿರಾಕರಿಸಿದ ದ್ರೋಣಾ ಚಾರ್ಯರನ್ನೇ ಗುರುವೆಂದು ಸ್ವೀಕರಿಸಿ ಅವರ ಮಣ್ಣಿನ ಪ್ರತಿಮೆಯ ಮುಂದೆಯೇ ದೂರದ ಕಾಡಿನಲ್ಲಿ ಅಸಾಧಾರಣ ಬಿಲ್ವಿದ್ಯೆಯನ್ನು ಕಲಿತನು ಹಾಗೂ ದ್ರೋಣರು ಗುರುದಕ್ಷಿಣೆಯನ್ನು ಕೇಳಿದ ಕೂಡಲೇ ತನ್ನ ಹೆಬ್ಬೆರಳನ್ನೇ ದಕ್ಷಿಣೆಯಾಗಿ ನೀಡಿದನು. ಇದು ಜನಜನಿತವಾದ ಕಥೆ.ಇಂದಿನ ಕಲಿಯುಗದ ಕ್ರಿಕೆಟ್ ದ್ರೋಣಾಚಾರ್ಯರೊಬ್ಬರು ಪ್ರಚಾರದಿಂದ ದೂರವಿದ್ದುಕೊಂಡು, ಅಪ್ರತಿಮ ಸಾಧಕರನ್ನು ತಯಾರಿಸಿ, ಯಾವುದೇ ಗುರುದಕ್ಷಿಣೆಯನ್ನು ಅಪೇಕ್ಷಿಸದೇ ತಮ್ಮ ಜೀವನವೆಲ್ಲಾ ಮುಡಿಪಾಗಿಟ್ಟ ಉದಾಹರಣೆಯ ಬಗ್ಗೆ ಯಾರಿಗಾದರೂ ಗೊತ್ತಿದೆಯೇ? ಬಹುಶ: ಗೊತ್ತಿರಲಿಕ್ಕಿಲ್ಲ, ಆದರೆ ಇದು ನಿಜ.

ಆ ದ್ರೋಣಾಚಾರ್ಯರು ಬೇರ್‍ಯಾರೂ ಅಲ್ಲ, ಕರ್ನಾಟಕದ ಶ್ರೇಷ್ಠ ಕ್ರಿಕೆಟ್ ತರಬೇತುದಾರರಾದ ಶ್ರೀ ಎಂ.ಕೆ. ಸೀತಾ ರಾಮರವರು. ಇವರು ಎಲೆಮರೆಕಾಯಿಯಾಗೇ ಇದ್ದುಕೊಂಡು ಮಹತ್ತರ ಸಾಧನೆಗಳನ್ನು ಮಾಡಿರುವ ಅಪರೂಪದ ವ್ಯಕ್ತಿ. ಇವರ ಸಾಧನೆಗಳ ಸಿಂಹಾಲೋಕನ ಮಾಡಿದಾಗ ಇವರೇಕೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಪುರಸ್ಕೃತರಾಗಿಲ್ಲ ಎಂಬುದರ ಬಗ್ಗೆ ಯಾರಿಗೇ ಆಗಲೀ ಅಚ್ಚರಿಯುಂಟಾಗುತ್ತದೆ. ತಮ್ಮ ಯುವ ವಯ್ಯಸ್ಸಿನಲ್ಲಿ ಶ್ರೇಷ್ಠ ಆಲ್ ರೌಂಡರ್ ಆಗಿದ್ದ ಶ್ರೀ ಎಂ.ಕೆ.ಸೀತಾರಾಮರವರು,ಕಠಿಣ ಪರಿಶ್ರಮ, ಇಚ್ಛಾಶಕ್ತಿ ಮತ್ತು ಕ್ರಿಯಾಶೀಲತೆಗಳಿಂದ ಮೇಲೆ ಬಂದ ವ್ಯಕ್ತಿ. ಭಾರತೀಯ ರೇಲ್ವೆಯಲ್ಲಿ ನೌಕರಿಯಲ್ಲಿದ್ದ ಇವರು ಮೈಸೂರು ರಾಜ್ಯದ ‘ಎ’ ತಂಡ (ವೈ.ಎಸ್.ರಾಮಸ್ವಾಮಿ ಮತ್ತು ಆದಿಶೇಷ ಇದ್ದಂಥ ತಂಡ) ಮದರಾಸು ‘ಎ’ ತಂಡದ ಲೀಗ್, ದಕ್ಷಿಣ ರೈಲ್ವೆಗಳನ್ನು ಪ್ರತಿನಿಸಿದ್ದೇ ಅಲ್ಲದೇ ೧೯೪೯ ರಲ್ಲಿ ಭಾರತೀಯ ದಕ್ಷಿಣ ರೈಲ್ವೆಯ ಪರವಾಗಿ ರಣಜಿ ಟ್ರೋಫಿ ಪಂದ್ಯಾವಳಿಗಳಲ್ಲೂ ಸಹ ಆಡಿದ್ದಾರೆ. ಒಬ್ಬ ಆಟಗಾರರಾಗಿ ಇವರಿಗಿದ್ದ ಅಸಾಧಾರಣ ಸಾಮರ್ಥ್ಯವನ್ನು ಗಮನಿಸಿದಾಗ ಇವರು ಭಾರತ ದೇಶವನ್ನು ಪ್ರತಿನಿಸದೇ ಇದ್ದದ್ದು ದುರದೃಷ್ಟಕರ ಎಂದೆನಿಸದೇ ಇರದು.ಬ್ಯಾಟಿಂಗನಲ್ಲಿ ಸಿಂಹದ ಮರಿಯಂತೆ ಗುಡುಗಿ,ಬೌಲಿಂಗನಲ್ಲಿ ಉರಾಳಿಗಳ ಮೈನಡುಗಿಸುತ್ತಿದ್ದ ಇವರು ಫಿಲ್ಡಿಂಗನಲ್ಲಿಯೂ ಒಳ್ಳೆಯ ಪಟುವಾಗಿದ್ದರು. ಇವೆಲ್ಲಾ ಶ್ರೇಷ್ಠ ಗುಣಗಳೇ ಮುಂದೆ ಇವರನ್ನು ಒಬ್ಬ ಉತ್ತಮ ಕೋಚ್ ಆಗಿ ಮಾರ್ಪಡಿಸಿತು. ಆಟಗಾರರಾಗಿ ೨೫ ವರ್ಷಗಳ ಕಾಲದ ಸತತ ಪರಿಶ್ರಮದ ನಂತರ ಕ್ರಿಕೆಟ್ ಕೋಚ್ ಆಗಿ ಸೇವೆ ಸಲ್ಲಿಸಬೇಕೆಂದು ನಿರ್ಧರಿಸಿ ಪೂರ್ಣಾವಧಿ ವೃತ್ತಿಯನ್ನು ಆರಂಭಿಸಿದರು.ಹೀಗೆ ಪ್ರಾರಂಭಿಸಿದ ತರಬೇತಿ ವೃತ್ತಿಯನ್ನು ಇಂದಿಗೂ ಇವರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ತರಬೇತಿದಾರರಾಗಿ ಇವರು ದಾಖಲೆಯ ಮಹಾಪೂರವನ್ನೇ ಸೃಷ್ಟಿಸಿದ್ದಾರೆ. ೭೪ ಕ್ರಿಕೆಟ್ ಶಿಬಿರಗಳನ್ನು ಈವರೆಗೆ ಇವರು ನಡೆಸಿದ್ದಾರೆ.ಕರ್ನಾಟಕದ ಯಾವುದೇ ಬೇತಿದಾರರೂ ಇಷ್ಟೊಂದು ಕೋಚಿಂಗ್ ಕ್ಯಾಂಪಗಳನ್ನು ನಡೆಸಿಲ್ಲ ಎಂಬುದು ಗಮನಾರ್ಹ. ದೇಶದ ಕೆಲವೇ ಕೋಚಗಳು ಈ ಸಾಧನೆ ಗೈದಿದ್ದಾರೆ.. ಇದಲ್ಲದೇ ಎರಡು ಸಾವಿರಕ್ಕೂ ಹೆಚ್ಚು ಈಡಾಪಟುಗಳನ್ನು ಇವರು ತರಬೇತುಗೊಳಿಸಿದ್ದಾರೆ. ಇದೂ ಸಹ ಕರ್ನಾಟಕದ ಕ್ರಿಕೆಟಗೆ ಒಂದು ದಾಖಲೆ. ಇವರ ಶಿಷ್ಯರು ಇಂದು ಕ್ರಿಕೆಟ್ ಆಟದ ವಿವಿಧ ಹಂತಗಳಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಇವರ ಅನೇಕ ಶಿಷ್ಯರು ಕರ್ನಾಟಕ ರಾಜ್ಯವನ್ನು ರಣಜಿ ಪಂದ್ಯಗಳಲ್ಲಿ ಪ್ರತಿನಿಧಿಸಿದ್ದಾರೆ.ಹಾಗೂ ಪ್ರತಿನಿಧಿಸಿತ್ತಲೂ ಇದ್ದಾರೆ. ಇವರು ತರಬೇತುಗೊಳಿಸಿದ ಎಲವು ರಣಜಿ ಆಟಗಾರರೆಂದರೆ ಗೋವಾ ಪರ ಆಡುತ್ತಿರುವ ಪ್ರಮೋದ ಕಾಮತ್,ಮಹಾರಷ್ಟ್ರ ಪರ ಆಡಿರುವ ಜಯಂತ್ ಶೆಟ್ಟಿ ಹಾಗೂ ಗ್ರೆಗರಿ ಡಿಮಾಂಟೆ, ಕರ್ನಾಟಕದ ಪರ ಆಡಿರುವ ಮಾರುತಿ ಶಾನಬಾಳ್,ರಾಜೇಶ ಕಾಮತ್,

ಸುರೇಶ ಶಾನಬಾಳ್ ಹಾಗೂ ಈಗಿನ ವಿಕೆಟ್ ಕೀಪರ್ ಅವಿನಾಶ ವೈದ್ಯ.

ಸೀತಾರಾಮರವರ ತರಬೇತಿ ವಿಧಾನ ತೀರಾ ವಿಭಿನ್ನವಾದದ್ದು.ಕ್ರಿಕೆಟ್ ಒಂದು ದೈಹಿಕ ಕ್ರೀಡೆ ಎನ್ನುವುದಕ್ಕಿಂತ,ಅದೊಂದು ಮಾನಸಿಕ ಕ್ರೀಡೆ ಎಂದು ಹೇಳುವ ಇವರು,ತಮ್ಮ ಶಿಷ್ಯರಿಗೆ ಮೊದಲು ಕ್ರಿಕೆಟ್ಟಿನ ಬಗ್ಗೆ ಪೂರ್ಣ ಮಾಹಿತಿ ನೀಡಿ ಅವರ ಮನೋಬಲವನ್ನು ಹೆಚ್ಚಿಸುತ್ತಾರೆ. ನಂತರವಷ್ಟೇ ದೈಹಿಕ ಆಟದ ವಿಧಿ ವಿಧಾನಗಳನ್ನು ಬೋಧಿಸುವುದು.ತರಬೇತಿ ಶಿಬಿರಗಳಲ್ಲಿ ಸ್ವತ: ತಾವೇ ಬ್ಯಾಟಿಂಗ,ಬೌಲಿಂಗ ಮತ್ತು ಫೀಲ್ಡಿಂಗ್ ನೀಡುತ್ತಾರೆ. ಕ್ಷೇತ್ರಪಾಲನೆಯಲ್ಲಿ ಇಂದಿನ ಕ್ರಿಕೆಟನಲ್ಲಿರವ ಮಹತ್ವವನ್ನು ಮನಗಂಡ ಇವರು,ತಮ್ಮ ಶಿಷ್ಯರಿಗೆ ಕ್ಷೇತ್ರಪಾಲನೆಯಲ್ಲಿ ಕಠಿಣ ಅಭ್ಯಾಸವನ್ನು ಮಾಡಿಸುತ್ತಾರೆ.ಈ ಕಾರಣಗಳಿಂದ ಶ್ರೀ ಸೀತರಾಮ್ ರವರು ಅವರ ಶಿಷ್ಯರಿಗೆಲ್ಲ ಅಚ್ಚುಮೆಚ್ಚು.ರಾಷ್ಟ್ರೀಯ ತಂಡದಲ್ಲಿ ಸ್ಥಾನವನ್ನು ಗಿಟ್ಟಿಸುವ ಹಾದಿಯಲ್ಲಿರುವ ಕರ್ನಾಟಕದ ವಿಕೆಟ್ ಕೀಪರ ಅವಿನಾಶ್ ವೈದ್ಯ ತಮ್ಮ ಗುರುಗಳ ಬಗ್ಗೆ ಹೇಳುತ್ತಾ “ನನಗೆ ಶ್ರೀ ಸೀತರಾಮರವರು ನಡೆಸಿದ ಅನೇಕ ತರಬೇತಿ ಶಿಬಿರಗಳಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆಯಿತೆಂದು ಹೇಳಲು ಹೆಮ್ಮೆಯಾಗುತ್ತದೆ. ನನ್ನ ಶಾಲಾ ದಿನಗಳಿಂದಲೂ ಶ್ರೀ ಸೀತರಾಂ ರವರು ನನಗೆ ತರಬೇತಿ ನೀಡಿ, ಇಂದು ನಾನು ಉತ್ತಮ ಕ್ರಿಕೆಟಿಗನಾಗುವಂತೆ ಮಾಡಿದ್ದಾರೆ. ನಾನಿಂದು ಕರ್ನಾಟಕ ರಣಜಿ ತಂಡದಲ್ಲಿದರೂ,ಅವರು ನನಗೆ ಆಗ ಕಲಿಸಿದ ಪಾಠಗಳು ಇಂದಿಗೂ ಪ್ರೇರಣಾತ್ಮಕವಾಗಿದೆ” ಎಂದಿದ್ದಾರೆ. ಹಾಗೇ ರಣಜಿ ಆಟಗಾರ ಸುರೇಶ ಶಾನಬಾಳ್ ರವರು,ಕ್ರಿಕೆಟ್ ಸೀತಾರಾಮ್ ರವರ ಅನುಭವ,ಕ್ರಿಕೆಟ್ ಜ್ಞಾನ ಅದ್ವಿತಿಯವಾದದ್ದು ಎಂದು ಏಳುತ್ತಾರೆ. ಇವರು ಕರ್ನಾಟಕದಲ್ಲೇ ಪ್ರಪ್ರಥಮ ಬಾರಿಗೆ ಕ್ರಿಕೆಟ್ ಆಟವನ್ನು ಕಲಿಸುವ ಒಂದು ಪುಸ್ತಕವನ್ನು ಹೊರತಂದಿದ್ದಾರೆ. ‘ಲರ್ನಿಂಗ್ ಕ್ರಿಕೆಟ್’ ಎಂಬ ಶಿರ್ಷಿಕೆಯುಳ್ಳ ೫೦ ಸಂಪುಟದ ಈ ಪುಸ್ತಕವನ್ನು ತಮ್ಮ ೫೦ ವರ್ಷದ ಕ್ರಿಕೆಟ್ ಜೀವನದ ಅಪಾರ ಅನುಭವದಿಂದ ಬರೆದಿದ್ದಾರೆ. ಈ ಪುಸ್ತಕದ ಪ್ರತಿಯೊಂದು ಪುಟವೂ, ಪ್ರತಿಯೊಂದು ವಿಷಯವೂ, ಕ್ರಿಕೆಟ್ ಆಟಗಾರನಾಗ ಬಯಸುವ ವ್ಯಕ್ತಿಗೆ ಅತ್ಯಮೂಲ್ಯವಾದ ಮಾರ್ಗದರ್ಶನವನ್ನು, ಮಾಹಿತಿಯನ್ನೂ ನೀಡುತ್ತದೆ. ಭಾರತದ ಸರ್ವಕಾಲಿಕ ಶ್ರೇಷ್ಠ ಆಟಗಾರ ಹಾಗೂ ಪ್ರಸ್ತುತ ಭಾರತದ ಕ್ರಿಕೆಟ್ ಆಯ್ಕೆ ಸಮಿತಿಯ ಅಧ್ಯಕ್ಷರಾದ ಶ್ರೀ ಗುಂಡಪ್ಪ ವಿಶ್ವನಾಥ್ ರವರು ಈ ಪುಸ್ತಕವನ್ನು ಕೂಲಂಕುಶವಾಗಿ ಓದಿ ಮನಸಾರೆ ಮೆಚ್ಚಿ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದಿದ್ದಾರೆ. ಸೀತಾರಾಂರವರು ಈ ಪುಸ್ತಕವನ್ನು ಶ್ರೀ ಜಿ.ಆರ್.ವಿಶ್ವನಾಥರ ಹೆಸರಿನಲ್ಲೇ ಸಮರ್ಪಿಸಿದ್ದಾರೆ. ಮುದ್ರಣ ಕಾಗದ ಛಾಯಚಿತ್ರಗಳ ಪ್ರಕಟಣೆಗಳಿಗೆ ತಗುಲುವ ಅಪಾರ ವೆಚ್ಚವನ್ನು ತಮ್ಮ ನಿಯಮಿತ ಅದಾಯದಲ್ಲಿ ಭರಿಸಿ ಇವರು ಈ ಪುಸ್ತಕವನ್ನು ಹೊರತಂದಿದ್ದಾರೆ.

ಭಾರತೀಯ ರೇಲ್ವೆಯಿಂದ ನಿವೃತ್ತಿ ಹೊಂದಿ ಬೆಂಗಳೂರಿನ ಯಲಹಂಕ ಉಪನಗರದಲ್ಲಿ ವಾಸಿಸುತ್ತಿರುವ ಇವರು ಕ್ರಿಕೆಟ್ ಪಟುಗಳ ನಿರ್ಮಾಣದಲ್ಲಿ ಈಗಲೂ ತೊಡಗಿದ್ದಾರೆ. ಆದರೆ ತಮ್ಮ ಜೀವನವನ್ನೆಲ್ಲಾ ಕ್ರಿಕೆಟ್ ಗಾಗಿಯೇ ಮುಡಿಪಾಗಿಟ್ಟು ಕರ್ನಾಟಕದಲ್ಲೇ ಒಬ್ಬ ಶ್ರೇಷ್ಠ ತರಬೇತುದಾರನೆಂದು ಹೆಸರು ಮಾಡಿದ್ದರೂ, ರಾಜ್ಯ ಸರ್ಕಾರವು ಇವರ ಸಾಧನೆಯನ್ನು ಕಡೆಗಾಣಿಸಿರುವುದು ದುರದೃಷ್ಟಕರ. ಹುಬ್ಬಳ್ಳಿ ನಗರಪಾಲಿಕೆಯು ಇವರ ಸಾಧನೆಯನ್ನು ಗಮನಿಸಿ, ಸನ್ಮಾನಿಸಿರುವುದನ್ನು ಬಿಟ್ಟರೆ ಇವರಿಗೆ ರಾಜ್ಯ ಮಟ್ಟದಲ್ಲಿ ಯಾವುದೇ ಮನ್ನಣೆ ದೊರೆತ್ತಿಲ್ಲ.

Feb 15th 1994 Hosa Diganta Cricket Drona-M.K.Sitharam